ಸಾಕ್ಷಿಯನ್ನು ದಿಃ **07.02.2020** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ದಾಖಲೆಗಳನ್ನು ಗುರುತಿಸುವ ಬಗ್ಗೆ ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಜೆ.ಬಿ.ಆರ್ ವಕೀಲರಿಂದಃ

ನಾನು **1** ಮತ್ತು **2** ನೇ ಪ್ರತಿವಾದಿಗಳು ನನ್ನ ಪರವಾಗಿ ದಿನಾಂಕ **18.03.2016** ರಂದು ಬರೆದುಕೊಟ್ಟ ನೋಂದಾಯಿತ ಕರಾರು ಪತ್ರ ಹಾಜರುಪಡಿಸುತ್ತಿದ್ದೇನೆ ಅದನ್ನು ನಿಪಿ-**1** ಎಂದು, ನಿಪಿ-**1** ರಲ್ಲಿರುವ ಪ್ರತಿವಾದಿಗಳ ಸಹಿಯನ್ನು ನಿಪಿ-**1** ಎ ಮತ್ತು ನಿಪಿ-**1** ಬಿ ಎಂದು, ಪ್ರಕಾಶ ಮತ್ತು ಪಾಂಡುರಂಗ ನಿಪಿ-**1** ಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ, ಅವರ ಸಹಿಗಳನ್ನು ನಿಪಿ-**1** ಸಿ ಮತ್ತು ನಿಪಿ-**1** ಡಿ ಎಂದು, ಪತ್ರವನ್ನು ಸಿದ್ದೇಗೌಡರವರು ಬರೆದಿರುತ್ತಾರೆ ಅವರ ಸಹಿಯನ್ನು ನಿಪಿ-**1** ಇ ಎಂದು ಗುರುತಿಸಲಾಯಿತು. ನಿಪಿ-**1** ಕ್ಕೆ ನಾನು ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ. ಇ.ಸಿಯನ್ನು ನಿಪಿ-**2** ಎಂದು, ಪಹಣಿಯನ್ನು ನಿಪಿ-**3** ಎಂದು, ನಾನು ವಕೀಲರ ಮೂಲಕ ಪ್ರತಿವಾದಿಗಳಿಗೆ ನೀಡಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ-**4** ಎಂದು, **2** ಅಂಚೆ ರಸೀದಿಗಳನ್ನು ನಿಪಿ-**5** ಮತ್ತು ನಿಪಿ-**6** ಎಂದು, **2** ಅಂಚೆ ಸ್ವೀಕೃತಗಳನ್ನು ನಿಪಿ-**7** ಮತ್ತು ನಿಪಿ-**8** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಆದರೆ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಾಯಾವಕಾಶ ಕೋರಿದ್ದು ಮುಂದೂಡಲಾಯಿತು.

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು,

ತಿ.ನರಸೀಪುರ.